
## ನನ್ನ ಓದು




**ಸರಸ ಸೌಗಂಧಿಕದ ಪರಿಮಳ**
ಕುಮಾರವ್ಯಾಸ ಭಾರತ ಸಂಗ್ರಹ
ಸಂಪಾದಕ: ಕೃಷ್ಣಮೂರ್ತಿ ಹನೂರು
ಪು: 448 ಬೆ: ರೂ. 400
ಪ್ರ: ಅಹರ್ನಿಶಿ ಪ್ರಕಾಶನ
ಜ್ಞಾನವಿಹಾರ ಬಡಾವಣೆ,
ಕಂಟ್ರಿಕ್ಲಬ್ ಹತ್ತಿರ, ವಿದ್ಯಾನಗರ,
ಶಿವಮೊಗ್ಗ – 577 203
ದೂರವಾಣಿ: 94491 74662

‘ನನ್ನ ಓದು’ ಕನ್ನಡದ ಮುಖ್ಯ ಪುಸ್ತಕಗಳನ್ನು ಪರಿಚಯಿಸುವ ಮಾಲಿಕೆ. ಪ್ರತಿ ತಿಂಗಳು ಕನ್ನಡ ಪುಸ್ತಕಗಳ ಕುರಿತ ಅವಲೋಕನವನ್ನು ಇಲ್ಲಿ ಕೊಡಲಾಗುತ್ತದೆ.

ಎಚ್. ದಂಡಪ್ಪ

# ಕುಮಾರವ್ಯಾಸ ಭಾರತದ ಆಪ್ತ, ಉಪಯುಕ್ತ ವಾಚಿಕೆ

### 1

‘ಕಲಿಯದವರಿಗೂ ಕಾಮಧೇನು’ ಎಂದು ಕನ್ನಡ ನಾಡಿನ ಜನಮಾನಸದಲ್ಲಿ ನೆಲೆಸಿರುವ ಮಹಾಕವಿ ಕುಮಾರವ್ಯಾಸನ ‘ಕರ್ಣಾಟ ಭಾರತ ಕಥಾಮಂಜರಿ’ಯ ಸಂಗ್ರಹವನ್ನು ‘ಸರಸ ಸೌಗಂಧಿಕಾ ಪರಿಮಳ’ ಎಂಬ ಹೆಸರಿನಿಂದ ಕೃಷ್ಣಮೂರ್ತಿ ಹನೂರು ಅವರು ಪ್ರಕಟಿಸಿದ್ದಾರೆ. ಆಧುನಿಕ ಕಾಲದಲ್ಲಿ ಮಹಾಕಾವ್ಯಗಳನ್ನು ಓದುವುದಕ್ಕೆ ಬೇಕಾದ ಕಾಲ, ತಾಳ್ಮೆ ಇರುವುದಿಲ್ಲ. ಪಂಪನ ಕೃತಿಗಳನ್ನು ಓದುವುದಕ್ಕೆ ಕೆಲವರು ಹಿಂಜರಿಯುತ್ತಾರೆ. ಏಕೆಂದರೆ ಅವು ದೀರ್ಘವಾಗಿದ್ದು ಉಳಿದ ಪುಸ್ತಕಗಳನ್ನು ಓದಲು ಸಮಯ ಸಾಕಾಗುವುದಿಲ್ಲ. ಆದ್ದರಿಂದ ಶ್ರೇಷ್ಠ ಮಹಾಕಾವ್ಯಗಳ ಸಂಗ್ರಹಗಳು ಕೈಯಲ್ಲಿ ಸುಲಭವಾಗಿ ಹಿಡಿದು ಓದಲು ಸಾಧ್ಯವಾಗುವಷ್ಟು ಪುಟ್ಟ ಪುಸ್ತಕಗಳು ಬಂದರೆ ಅನುಕೂಲ. ಇಂಗ್ಲಿಷಿನಲ್ಲಿ ಈ ಬಗೆಯ ಸಂಗ್ರಹಗಳು ಬಂದಿವೆ. ‘**Ancient classics for English Readers**’ನ ರೀತಿಯ ಕೃತಿಗಳು ಬರಬೇಕು. ಆಗ ಕೆಟ್ಟ ವ್ಯಾಖ್ಯಾನ ಅನುವಾದಗಳನ್ನು ಓದಿ ಕಾವ್ಯದ ಸ್ವಾರಸ್ಯವನ್ನು ಕಳೆದುಕೊಳ್ಳುವುದು ತಪ್ಪುತ್ತದೆ. ಮೂಲದ ಸಂಗ್ರಹವನ್ನು ಓದಿ ಕಾವ್ಯವನ್ನು ಅರ್ಥೈಸಿಕೊಳ್ಳುವುದು ಬಹಳ ಮುಖ್ಯ. ಬದುಕಿನ ಅವಧಿ ಚಿಕ್ಕದು, ಜಗತ್ತಿನ ಶ್ರೇಷ್ಠ ಸಾಹಿತ್ಯದ ರಾಶಿಯಲ್ಲಿ ನಾವು ಓದುವುದು ಅತ್ಯಲ್ಪ. ಆದರೆ, ಈ